# ಸಂಜು ಸ್ಯಾಮ್ಸನ್ ರನ್ ಫೆಸ್ಟ್

■ ಗಿರೀಶ ದೊಡ್ಡಮನಿ




ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸಂಜು ಸ್ಯಾಮ್ಸನ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ ಇಬ್ಬರೂ ಈ ಐಪಿಎಲ್‌ನಲ್ಲಿ ಶತಕ ಗಳಿಸಿರುವ ಬ್ಯಾಟರ್‌ಗಳು. ಅದರಲ್ಲೂ ಈ ಟೂರ್ನಿಯಲ್ಲಿ ಸಂಜು ಎರಡು ಶತಕ ಗಳಿಸಿದ್ದಾರೆ. ವಾಂಖೆಡೆ ಕ್ರೀಡಾಂಗಣದಲ್ಲಿ ಮುಂಬೈ ಇಂಡಿಯನ್ಸ್ ಎದುರು ಸಂಜು ಅಜೇಯ ಶತಕ ಗಳಿಸಿದರು. ಇನಿಂಗ್ಸ್‌ನ ಮೊದಲ ಎಸೆತದಿಂದಲೂ ಕೊನೆಯವರೆಗೂ ಆಡಿದರು. ಅಜೇಯರಾಗಿ ಉಳಿದರು. ಆದರೂ ಅವರ ಹಾವಭಾವದಲ್ಲಿ ಒಂದಿಷ್ಟೂ ಸುಸ್ತು ಕಾಣಲಿಲ್ಲ. ಇನ್ನೂ ಹಲವು ಓವರ್‌ಗಳವರೆಗೆ ಕ್ರೀಸ್‌ನಲ್ಲಿರುವ ಚೈತನ್ಯ ಅವರಲ್ಲಿ ಕಾಣುತ್ತಿತ್ತು.

ಆದರೆ ಅದೇ ಅಭಿಷೇಕ್ ಡೆಲ್ಲಿ ಕ್ಯಾಪಿಟಲ್ಸ್ ಎದುರು ಶತಕ ಹೊಡೆದಿದ್ದರು. ಅವರೂ ಕೂಡ ಆರಂಭಿಕ ಬ್ಯಾಟಿಂಗ್ ಮಾಡಿ, ಕೊನೆಯ ಎಸೆತದವರೆಗೂ ಆಡಿದ್ದರು. ಆದರೆ ಕೊನೆಯ ಹಂತದ ಓವರ್‌ಗಳಲ್ಲಿ ಅವರು ಸ್ವಲ್ಪ ಬಳಲಿದಂತೆ ಕಂಡರು. ಇನ್ನೊಂದು ಬದಿಯಲ್ಲಿದ್ದ ಹೆನ್ರಿಚ್ ಕ್ಲಾಸೆನ್‌ಗೆ ಹೆಚ್ಚು ಎಸೆತಗಳನ್ನು ಆಡುವ ಅವಕಾಶ ಬಿಟ್ಟುಕೊಟ್ಟರು. ಆರಂಭದ ಆರು ಓವರ್‌ಗಳಲ್ಲಿ ಅಭಿಷೇಕ್ ಅವರಿಗೆ ಇದ್ದ ಶಕ್ತಿ ಡೆತ್ ಓವರ್‌ಗಳಲ್ಲಿ ಇರಲಿಲ್ಲ. ಆದರೆ ಸಂಜು ವಿಷಯ ಹಾಗಲ್ಲ. ಎಲ್ಲ ಓವರ್‌ಗಳಲ್ಲಿಯೂ ಒಂದೇ ಸಾಮರ್ಥ್ಯ. ಅಷ್ಟೇ ಅಲ್ಲ; ಇದೆಲ್ಲದರ ನಂತರ ಅದ್ಭುತವಾದ ವಿಕೆಟ್‌ಕೀಪಿಂಗ್ ಕೂಡ ಮಾಡಿದ್ದರು. ಚೆನ್ನೈ ತಂಡಕ್ಕೆ ಮಹೇಂದ್ರಸಿಂಗ್ ಧೋನಿಯ ಕೊರತೆ ಕಾಡದಂತೆ ನೋಡಿಕೊಂಡಿದ್ದಾರೆ. ಅವರು ಡೈವ್ ಮಾಡಿ ಪಡೆದ ಕ್ಯಾಚ್‌ಗಳು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದವು.

ಇವರಿಬ್ಬರ ಹೋಲಿಕೆ ಮಾಡಿದ್ದು. ಯಾರು ಹೆಚ್ಚು, ಯಾರು ಕಮ್ಮಿ ಎಂಬ ಚರ್ಚೆಗಾಗಿ ಅಲ್ಲ. ಸಂಜು ದೀರ್ಘ ಮಾದರಿ ಕ್ರಿಕೆಟ್‌ನ ಆಟಗಾರ. ಆದ್ದರಿಂದ ಅವರಿಗೆ ಈ ಶಕ್ತಿ ಮೈಗೂಡಿದೆ. ಆದರೆ ಅಭಿಷೇಕ್ ಹೆಚ್ಚು ಚುಟುಕು ಕ್ರಿಕೆಟ್‌ನಲ್ಲಿ ಗುರುತಿಸಿಕೊಂಡವರು. ಅವರಿನ್ನೂ ದೀರ್ಘ ಮಾದರಿ (ಕೆಂಪು ಚೆಂಡು)ಯಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಬೇಕಿದೆ. ಅಭಿಷೇಕ್, ವೈಭವ್ ಸೂರ್ಯವಂಶಿ, ಪ್ರಿಯಾಂಶ್ ಆರ್ಯ ಅವರಂತಹ ಹೊಸ ತಲೆಮಾರಿನ ಚಿಗುರು ಪ್ರತಿಭೆಗಳಿಗೆ ಸಂಜು, ವಿರಾಟ್ ಕೊಹ್ಲಿ ಮಾದರಿಯಾಗಬೇಕು. ಏಕೆಂದರೆ; ಅವರ ಮಟ್ಟದ ಫಿಟ್‌ನೆಸ್ ಬೆಳೆಸಿಕೊಳ್ಳುವುದು ಮುಖ್ಯ.

ಸಂಜು ಅವರು ಮುಂಬೈ ಎದುರಿನ ಶತಕವನ್ನು ಮತ್ತೊಮ್ಮೆ ನೋಡಿ. ಒಂದು ಬದಿಯಲ್ಲಿ ವಿಕೆಟ್‌ಗಳು ಉರುಳುತ್ತಿದ್ದವು. ದೊಡ್ಡ ಜೊತೆಯಾಟಕ್ಕಾಗಿ ಸಂಜು ಅವರಿಗೆ ಯಾರಿಂದಲೂ ಬೆಂಬಲ ಇರಲಿಲ್ಲ. ಆದರೆ, ಸಂಜು ಶಾಂತಚಿತ್ತ ಕಲಕಲು ಯಾರಿಗೂ ಸಾಧ್ಯವಾಗಲಿಲ್ಲ. ಕೇರಳದ 'ಚೇಟಾ' ಶಾಂತವಾಗಿ ಹರಿಯುವ ನದಿಯಂತೆ ಕಂಡರು. ಕೆಟ್ಟ ಎಸೆತಗಳು ಸಿಕ್ಕಾಗ ಜಲಪಾತದಂತೆ ಭೋರ್ಗರೆದರು. ಸಿಕ್ಸರ್, ಬೌಂಡರಿ ಬಾರಿಸಿದರು. 54 ಎಸೆತಗಳಲ್ಲಿ 101 ರನ್ ಹೊಡೆದರು. ಇಲ್ಲಿ ಇನ್ನೊಂದು ವಿಶೇಷ ಎಂದರೆ ತಮ್ಮ ತಂಡದ ಮೊತ್ತವನ್ನು 200 ರನ್‌ಗಳ ಗಡಿ ದಾಟಿಸಿದ ನಂತರವಷ್ಟೇ ತಮ್ಮ ಶತಕ ಪೂರ್ಣಗೊಳಿಸುವತ್ತ ಗಮನ ಕೊಟ್ಟರು. ಅವರ ಈ ಆಟದಿಂದಾಗಿಯೇ ಚೆನ್ನೈ ತಂಡವು ಗೆಲುವಿನತ್ತ ಸಾಗಲು ಸಾಧ್ಯವಾಯಿತು. ಇದರಿಂದ ಬೌಲರ್‌ಗಳಲ್ಲಿ ಮೂಡಿದ ಆತ್ಮವಿಶ್ವಾಸದ ಮುಂದೆ; ಗುರಿ ಬೆನ್ನಟ್ಟಿದ್ದ ಮುಂಬೈ ಇಂಡಿಯನ್ಸ್ ತಂಡವು ಮಣಿಯಲೇಬೇಕಾಯಿತು.

ಸಂಜು ಹೋದ ವರ್ಷದವರೆಗೂ ರಾಜಸ್ಥಾನ ರಾಯಲ್ಸ್ ತಂಡದಲ್ಲಿ